

# ನಗು ನಗುತಾ ನಲಿ...

ನಗು ಇಲ್ಲದೆ ಬದುಕು ಇದ್ದೀತೆ? ನಮ್ಮ ಮುಖದಲ್ಲಿನ ನಗು ಅಪರಿಚಿತರ ಮುಖದಲ್ಲೂ ಮಂದಹಾಸ ಮೂಡಿಸಬಲ್ಲದು. ನಮ್ಮ ಬದುಕಿನ ನೋವುಗಳನ್ನೂ ಒತ್ತಡಗಳನ್ನೂ ಪರಿಹರಿಸಬಲ್ಲ ಶಕ್ತಿ ನಗುವಿಗಿದೆ. ನಗುವಿನ ಕುರಿತ ಈ ವ್ಯಾಖ್ಯಾನ ನಟ ಯಶ್ ಅವರದು. ಅವರು ನಗುವಿನ ಮಹಿಮೆ ಬಣ್ಣಿಸಿದ್ದು 'ಸ್ಮೈಲ್ ಪ್ಲೀಸ್' ಚಿತ್ರದ ಸುದ್ದಿಗೋಷ್ಠಿಯಲ್ಲಿ. ಮದುವೆ–ಮಧುಚಂದ್ರದ ಮೂಡಿನಿಂದ ಹೊರಬಂದಿರುವ ಯಶ್ 'ಸ್ಮೈಲ್ ಪ್ಲೀಸ್' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಕಾರ್ಯಕ್ರಮದ ಕೇಂದ್ರಬಿಂದು ಆಗಿದ್ದರು.

ನಿರ್ಮಾಪಕ ಕೆ. ಮಂಜು ಅವರೊಂದಿಗಿನ ಸ್ನೇಹ ಕೂಡ ಯಶ್ ಅವರನ್ನು ಕಾರ್ಯಕ್ರಮಕ್ಕೆ ಕರೆತಂದಿತ್ತು. ಮಂಜು ಅವರ ಸ್ನೇಹಭಾವ ಹಾಗೂ ಮರುಳು ಮಾಡುವ ನಗುವನ್ನು ಬಣ್ಣಿಸಿದ ಅವರು, ರಂಗಾಯಣ ರಘು ಅವರ ನಗೆಚಾತುರ್ಯವನ್ನೂ ಹೊಗಳಿದರು. ಅಂದಹಾಗೆ, 'ಸ್ಮೈಲ್ ಪ್ಲೀಸ್' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ರಘು ಕಾಣಿಸಿಕೊಂಡಿದ್ದಾರೆ. ತಮ್ಮ ಕುರಿತ ಮೆಚ್ಚುಗೆಯನ್ನು ನಗುನಗುತ್ತಲೇ ಸ್ವೀಕರಿಸಿದ ಅವರು – 'ಧಾವಂತದ ಬದುಕುಗಳನ್ನು ನಡೆಸುತ್ತಿರುವವರ ಮುಖದಲ್ಲಿ ನಗು ಅರಳಿಸುವ ತುರ್ತು ಇಂದಿನದು' ಎಂದರು.

ರಘು ಸಮರ್ಥ 'ಸ್ಮೈಲ್ ಪ್ಲೀಸ್' ಚಿತ್ರದ ನಿರ್ದೇಶಕರು. ಹೆಸರಿಗೆ ತಕ್ಕಂತೆ ತಮ್ಮ ಸಿನಿಮಾ ಪ್ರೇಕ್ಷಕರ ಮುಖದಲ್ಲಿ ಮಂದಹಾಸ ಮೂಡಿಸುವ ವಿಶ್ವಾಸ ಅವರದು. ರಘುನಂದನ್ ಚಿತ್ರದ ನಾಯಕ. ಕಾವ್ಯಾ ಶೆಟ್ಟಿ ಹಾಗೂ ನೇಹಾ ಪಾಟೀಲ್ ಚಿತ್ರದ ನಾಯಕಿಯರು. ಅನೂಪ್ ಸೀಳಿನ್ ಸಂಗೀತ, ಜೆ.ಎಸ್. ವಾಲಿ ಛಾಯಾಗ್ರಹಣ ಚಿತ್ರಕ್ಕಿದೆ. ಚಿತ್ರವನ್ನು ಫೆಬ್ರುವರಿ ಕೊನೆಯಲ್ಲಿ ತೆರೆ ಕಾಣಿಸಲು ನಿರ್ಮಾಪಕರು ಉದ್ದೇಶಿಸಿದ್ದಾರೆ.

# ಮತ್ತೆ ಬಂದರು ರಾಮು!

'ಕೋಟಿ ನಿರ್ಮಾಪಕ' ಎನ್ನುವ ವಿಶೇಷಣದ ನಿರ್ಮಾಪಕ ರಾಮು ಅವರ ಹೊಸ ಚಿತ್ರ 'ಮುಂಬೈ' ಗಣರಾಜ್ಯೋತ್ಸವ ಸಂದರ್ಭದಲ್ಲಿ ತೆರೆ ಕಾಣುತ್ತಿದೆ. ಇದು ರಾಮು ನಿರ್ಮಾಣದ 36ನೇ ಸಿನಿಮಾ.

ಎಸ್.ಆರ್. ರಮೇಶ್ 'ಮುಂಬೈ' ಚಿತ್ರದ ನಿರ್ದೇಶಕ. ಬಜೆಟ್‌ನ ಬಗ್ಗೆ ತಲೆ ಕೆಡಿಸಿಕೊಳ್ಳದೆ ಸಿನಿಮಾದ ಗುಣಮಟ್ಟಕ್ಕೆ ಆದ್ಯತೆ ನೀಡುವ ನಿರ್ಮಾಪಕರ ಉದಾರತೆ ಅವರಿಗೆ ಖುಷಿಕೊಟ್ಟಿದೆ. ಈ ಸ್ವಾತಂತ್ರ್ಯದ ಫಲವಾಗಿಯೇ ಅವರು 136 ದಿನಗಳ ಚಿತ್ರೀಕರಣ ನಡೆಸಲು ಸಾಧ್ಯವಾಗಿದೆ. ಬದುಕನ್ನು ಅರಸಿಕೊಂಡು ಮುಂಬೈ ಮಹಾನಗರಕ್ಕೆ ಹೋಗುವ ತರುಣನೊಬ್ಬ ಅಲ್ಲಿ ಎದುರಿಸುವ ಸವಾಲು–ಸಂಕಷ್ಟಗಳ ಕಥೆ ಚಿತ್ರದಲ್ಲಿದೆಯಂತೆ. ಸಿನಿಮಾದ ಮುಖ್ಯ ಭಾಗ ಮುಂಬೈನಲ್ಲಿ ನಡೆಯುವುದರಿಂದ ಚಿತ್ರಕ್ಕೆ 'ಮುಂಬೈ' ಎನ್ನುವ ಹೆಸರಿಡಲಾಗಿದೆ ಎನ್ನುವುದು ರಮೇಶ್ ಅವರ ಸ್ಪಷ್ಟನೆ.

'ಮದರಂಗಿ' ಖ್ಯಾತಿಯ ಕೃಷ್ಣ ಚಿತ್ರದ ನಾಯಕ. ರಾಮು–ರಮೇಶ್ ಗರಡಿಯಲ್ಲಿ ಕೆಲಸ ಮಾಡಿದ ಅನುಭವ ಅವರಿಗೆ ಕಲಿಕೆಯ ರೂಪದಲ್ಲಿ ಕಾಣಿಸಿದೆ. ದೊಡ್ಡ ಬ್ಯಾನರ್ ಚಿತ್ರವೊಂದರಲ್ಲಿ ನಟಿಸಿದ ಪುಲಕವೂ ಅವರಿಗಿದೆ. 'ಈ ಚಿತ್ರದ ಮೂಲಕ ಕೃಷ್ಣ ಸ್ಟಾರ್ ಆಗಲಿದ್ದಾರೆ' ಎನ್ನುವುದು ನಿರ್ಮಾಪಕರ ನಿರೀಕ್ಷೆ. ತೇಜು ಚಿತ್ರದ ನಾಯಕಿ. ಶ್ರೀಧರ್ ಸಂಭ್ರಮ್ ಸಂಗೀತ ಸಂಯೋಜನೆಯಲ್ಲಿ ಪುನೀತ್ ರಾಜಕುಮಾರ್ ಗೀತೆಯೊಂದನ್ನು ಹಾಡಿರುವುದು ಸಿನಿಮಾದ ವಿಶೇಷಗಳಲ್ಲೊಂದು.

